ಕರ್ನಾಟಕಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಭವನ, ಅರಮನೆ ರಸ್ತೆ,
ಬೆಂಗಳೂರು-01, ದಿ:-14-08-2024

## ವರ್ಗಾವಣೆ ಅಧಿಸೂಚನೆ

**ವಿಷಯ:** ಶ್ರೀ.ಮಲ್ಲೇಶಿ ನಾಯ್ಕ್.ಆರ್ ಉಪನ್ಯಾಸಕರು, ಸಿವಿಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿ ಇವರ ವರ್ಗಾವಣೆ ಕುರಿತು.

**ಉಲ್ಲೇಖ :**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ:29-01-2021 ಮತ್ತು 29-06-2021.
2. ಈ ಕಛೇರಿ ಅಧೀಸೂಚನೆ ಸಂಖ್ಯೆ: ಡಿಟಿಇ 17 ಇಎಸ್‌ಟಿ(8) 2024 , ದಿನಾಂಕ: 08.08.2024.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕ ಸಿಬ್ಬಂದಿಗಳ Karnataka State Civil Services (Regulation of Transfer of Teaching Staff of Department of Technical Education) Rules 2021 ಅನ್ನು ಅಧಿಸೂಚಿಸಲಾಗಿದೆ.

ನಿಗದಿತ ವೇಳಾಪಟ್ಟಿಯಂತೆ ದಿನಾಂಕ: 12-08-2024 ಮತ್ತು 13-08-2024 ರಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಸೂಸುತ್ರವಾಗಿ ನಡೆಸಲೆಂದು ತೀರ್ಮಾನಿಸಲಾಗಿದ್ದು, ಅದರಂತೆ ಉಲ್ಲೇಖ (2) ರ ಈ ಕಛೇರಿ ಅಧಿಸೂಚನೆಯಲ್ಲಿನ ಸೂಚನೆಗಳ ಕ್ರಮ ಸಂಖ್ಯೆ: 30 ಮತ್ತು 31 ರನ್ವಯ ಕೌನ್ಸಿಲಿಂಗ್ ಸಮಯದಲ್ಲಿ Login ಆದ ನಂತರ ಸ್ಥಳ ಆಯ್ಕೆ ವಿಷಯವನ್ನು ಹೊರತುಪಡಿಸಿ ಇತರೆ ವಿಷಯಗಳ ಕುರಿತು ಚರ್ಚೆಗೆ ಅವಕಾಶವಿರುವುದಿಲ್ಲ. ಈ ವಿಷಯದ ಉಲ್ಲಂಘನೆಯನ್ನು ದುರ್ನಡತೆಯೆಂದು ಪರಿಗಣಿಸಲಾಗುವುದು ಹಾಗೂ ಬೋಧಕರು login ಆದ ಕೂಡಲೇ Voice mute ಮಾಡಿಕೊಳ್ಳತಕ್ಕದ್ದು. ಆದ್ಯತಾ ಪಟ್ಟಿ ಪ್ರಕಾರ ಹೆಸರು ಘೋಷಣೆ ನಂತರ Unmute ಮಾಡಿಕೊಳ್ಳುವುದು ಎಂದು ತಿಳಿಸಲಾಗಿರುತ್ತದೆ.

ಆದಾಗ್ಯೂ ಸಹ ದಿನಾಂಕ: 12-08-2024 ರಂದು ನಡೆದ 2024-25 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್ ಬೋದಕರ ವಿಶೇಶ ಪ್ರಕರಣಗಳಡಿ ಕೋರಿಕೆ ಮೇರೆಗೆ ವರ್ಗಾವಣೆ ಕೌನ್ಸಿಲಿಂಗ್ ಸಂದರ್ಭದಲ್ಲಿ ಶ್ರೀ.ಮಲ್ಲೇಶಿ ನಾಯ್ಕ್.ಆರ್ ಉಪನ್ಯಾಸಕರು, ಸಿವಿಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿ ಇವರು ಅನಗತ್ಯವಾಗಿ ಹಾಗೂ ನಿರಂತರವಾಗಿ Unmute ಮಾಡಿ ವಾದ ಮಾಡಲು ಆರಂಭಿಸಿದ್ದು, ಇವರುಗಳಿಗೆ ಮಾತನಾಡಲು ಅವಕಾಶ ನೀಡಿ ಅವರ ಅನುಮಾನಗಳಿಗೆ ನಿಯಮಗಳನ್ನು ಉಲ್ಲೇಖಿಸಿ ವಿವರಿಸಿದರೂ ಸಹ ಸುಮ್ಮನಾಗದೆ ನಿರಂತರವಾಗಿ ಏರು ಧ್ವನಿಯಲ್ಲಿ ಮಾತನಾಡುತ್ತಾ, ಕೌನ್ಸಿಲಿಂಗ್ ಪ್ರಕ್ರಿಯೆಗೆ ಅಡಚಣೆ ಮಾಡಿರುತ್ತಾರೆ. ಜಂಟಿ ನಿರ್ದೇಶಕರು (ಆ) ಇವರ ಮಾತಿಗೆ ನಿರಂತರವಾಗಿ ಎದುರುತ್ತರವನ್ನು ನೀಡುತ್ತಾ, ತಮ್ಮ ವಿತಂಡವಾದ ಮುಂದುವರಿಸಿರುತ್ತಾರೆ. ಮಾನ್ಯ ನಿರ್ದೇಶಕರು ಮಧ್ಯ ಪ್ರವೇಶಿಸಿ ತಿಳುವಳಿಕೆ ಹೇಳಲು ಪ್ರಯತ್ನಿಸಿದರೂ ಸಹ ಅವರ ಮಾತನ್ನು ಕೇಳದೆ

ಏರು ಧ್ವನಿಯಲ್ಲಿ ವಾದ ಮಾಡುತ್ತ ಅವಿಧೇಯತೆಯಿಂದ ವರ್ತಿಸಿ ಜವಬ್ದಾರಿಯುತ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದು ಕೊಂಡಿರುತ್ತೀರಿ ಹಾಗೂ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿರುವ ಇನ್ನುಳಿದ ಬೋಧಕರನ್ನು ಪ್ರಚೋದನೆ ನೀಡುವಂತೆ ವರ್ತಿಸಿದ್ದಲ್ಲದೆ, ಕೌನ್ಸಿಲಿಂಗ್‌ಗೆ ಅಡ್ಡಿಯುಂಟು ಮಾಡುವಂತೆ ವರ್ತಿಸಿರುತ್ತೀರಿ.

ಉಲ್ಲೇಖ (1) ರ Karnataka State Civil Services (Regulation of Transfer of Teaching Staff of Department of Technical Education) Rules 2021 ನಿಯಮ 11 ರಂತೆ **Powers of Competent Authority.-** Not withstanding anything contained in these rules, any teaching staff may be transferred to any place in Zone-D by the Competent Authority:-

(i) On the basis of prima facie findings of misconduct or misbehavior or financial irregularities or any other act of indiscipline; or

(ii) On the basis of complaints and prima facie findings of misconduct or misbehavior or financial irregularities or any other act of indiscipline.

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಉಪನ್ಯಾಸರುಗಳು video conference ಮುಖಾಂತರ ಕೌನ್ಸಿಲಿಂಗ್‌ನಲ್ಲಿ ಹಾಜರಿರುವಾಗ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಶ್ರೀ ಶ್ರೀ.ಮಲ್ಲೇಶಿನಾಯ್ಕ.ಆರ್ ಉಪನ್ಯಾಸಕರು, ಸಿವಿಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿ, ಇವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಗಳು 2021 ರ ನಿಯಮ 3ರ ಉಪನಿಯಮ 1 (iii) ರನ್ವಯ ಬೇಜವಬ್ದಾರಿಯುತವಾಗಿ ನಡೆದುಕೊಂಡಿರುವುದು ಸ್ಪಷ್ಟ ದುರ್ವತನೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಶ್ರೀ ಶ್ರೀ.ಮಲ್ಲೇಶಿನಾಯ್ಕ.ಆರ್ ಉಪನ್ಯಾಸಕರು, ಸಿವಿಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿ ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ Karnataka State Civil Services (Regulation of Transfer of Teaching Staff of Department of Technical Education) Rules 2021 ನಿಯಮ 11 ರನ್ವಯ ಈ ಕೆಳಕಂಡಂತೆ ತತಕ್ಷಣ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸರ್ಕಾರಿ ಪಾಲಿಟೆಕ್ನಿಕ್ ಔರಾದ್ ಸಂಸ್ಥೆಯ ಸಿವಿಲ್ ವಿಭಾಗದ ಖಾಲಿ ಹದ್ದೆಗೆ ವರ್ಗಾಯಿಸಿ ಆದೇಶಿಸಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1. ಶ್ರೀ.ಮಲ್ಲೇಶಿನಾಯ್ಕ.ಆರ್ ಉಪನ್ಯಾಸಕರು, ಸಿವಿಲ್ ವಿಭಾಗ ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿ(ಸಂಬಂಧಪಟ್ಟ ಪ್ರಾಂಶುಪಾಲರಮೂಲಕ).
2. ಪ್ರಾಂಶುಪಾಲರು ಸರ್ಕಾರಿ ಪಾಲಿಟೆಕ್ನಿಕ್ ಹರಪನಹಳ್ಳಿಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಪ್ರಾಂಶುಪಾಲರು ಸರ್ಕಾರಿ ಪಾಲಿಟೆಕ್ನಿಕ್ ಔರಾದ್‌ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು;
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ;
3. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು – ಮಾಹಿತಿಗಾಗಿ;
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಜಂಟಿ ನಿರ್ದೇಶಕರು (ಆಡಳಿತ)/(ಸಿಡಿಸಿ)/(ತನಿಖೆ)/(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಆಡಳಿತಾಧಿಕಾರಿ / ರಿಜಿಸ್ಟ್ರಾರ್(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
7. ಇ- ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು);
8. ಡಿವಿಪಿ (1) ಮತ್ತು (2), ಇಎಸ್‌ಟಿ (1), (3), (5), (7), (9) ಮತ್ತು (10) ವಿಭಾಗಗಳಿಗೆ.
9. ಆಯುಕ್ತರ ಆಪ್ತ ಶಾಖೆಗೆ;
10. ಕಛೇರಿ ಪ್ರತಿ.